**ದಿನಾಂಕ: 15-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಒ ಜಿ ವಕೀಲರಿಂದ:-**

1) 2002 ನೇ ಸವಿಯಲ್ಲಿ ಉಪ ನೋಂದಣಿ ಕಚೇರಿಯಲ್ಲಿ ಸಲ್ಲಿಸಿರುವ ದಾಖಲೆಗಳ ಮೇಲೆ ದಾಖಲೆ ಬರೆದುಕೊಡುವ ವ್ಯಕ್ತಿಗಳ ಛಾಯಾ ಚಿತ್ರವನ್ನು ತೆಗೆಯುತ್ತಿದ್ದರು ಅಂದರೆ ನನಗೆ ನೆನಪಿಲ್ಲ. ಸದರಿ ಸಮಯದಲ್ಲಿ ಪಕ್ಷಗಾರರ ಛಾಯಾ ಚಿತ್ರವನ್ನುತೆಗೆಯುತ್ತಿದ್ದರು ಹಾಗೂ ಸಾಕ್ಷಿದಾರರ ಛಾಯಾ ಚಿತ್ರಗಳನ್ನು ಅಂಟಿಸುತ್ತಿದ್ದರು ಅಂದರೆ ನೆನಪಿಲ್ಲ. ನನಗೆ ಭದ್ರಪ್ಪನ ಪರಿಚಯ ಇರುವುದಿಲ್ಲ. ಭದ್ರಪ್ಪನ ಛಾಯಾ ಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ. 5-6 ಐಡೆಂಟಿಟಿ ಸೈಜ್ ಭಾವ ಚಿತ್ರಗಳನ್ನು ಸಾಕ್ಷಿಗೆ ತೋರಿಸಿ ಇವುಗಳಲ್ಲಿ ಭದ್ರಪ್ಪ ಯಾರು ಅಂತಾ ಗುರುತಿಸಲು ಕೇಳಲಾಗಿ ಸಾಕ್ಷಿಯು ಬಹಳ ವರ್ಷಗಳಾಗಿದ್ದರಿಂದ ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಐಡೆಂಟಿಟಿ ಸೈಜ್ ನ ಫೋಟೋ ತೋರಿಸಿ ಇದು ಭದ್ರಪ್ಪನ ಫೋಟೋ ಅಂದರೆ ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಭದ್ರಪ್ಪನ ಚುನಾವಣಾ ಗುರುತಿನ ಚೀಟಿ ತೋರಿಸಲಾಗಿ ಇದರಲ್ಲಿ ಭದ್ರಪ್ಪನ ಫೋಟೋ ಇದೆ ಎಂದು ತೋರಿಸಲಾಗಿ ಅದನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ನನಗೆ ಭದ್ರಪ್ಪನು ಪರಿಚಯ ಆಗಿದ್ದು 20 ನೇ ತಾರೀಖು ಅಂದರೆ ಸಾಕ್ಷಿಯು 19 ನೇ ತಾರೀಖಿನಂದು ಪರಿಚಯ ಆಗಿರುತ್ತಾನೆ. ಸದರಿ ಭದ್ರಪ್ಪನನ್ನು ರಾಮಪ್ಪ ಅಥವಾ ರಾಜಪ್ಪ ಅನ್ನುವವನು ಒಬ್ಬ ನನ್ನ ಕಡೆಗೆ ಕರೆದುಕೊಂಡು ಬಂದಿದ್ದ. ಸದರಿ ರಾಜಪ್ಪ ಅಥವಾ ರಾಮಪ್ಪ ಅನ್ನುವ ವ್ಯಕ್ತಿ ಕರೆದುಕೊಂಡು ಬಂದು ನನಗೆ ಹಿಂದಿನ ದಿನ ದಾಖಲೆಗಳನ್ನು ಕೊಟ್ಟಿದ್ದ.

2) ಏನೇನೂ ದಾಖಲೆ ಕೊಟ್ಟಿದ್ದನು ಅಂದರೆ ನನಗೆ ಡುಪ್ಲಿಕೇಟ್ ದಾಖಲೆಗಳಾದ ಮಂಡಲ ಪಂಚಾಯತಿ ಖಾತಾ ಎಕ್ಸಾಟ್ರಾಕ್ಟ ಹಾಗೂ ಸ್ವತ್ತನ್ನು ಖರೀದಿ ಮಾಡಿದ ನಕಲು ಪತ್ರವನ್ನು ಕೊಟ್ಟಿದ್ದರು. 19 ನೇ ತಾರೀಖಿನಂದು ಪತ್ರವನ್ನು ಕೈಯಿಂದ ಬರೆದು ತಯಾರಿಸಿ ಇಟ್ಟಿದ್ದೆ. ನಾನು ತಯಾರಿಸಿದ ಪತ್ರಕ್ಕೆ ಭದ್ರಪ್ಪ ಹೆಬ್ಬೆಟ್ಟು ಹಾಕಿರುತ್ತಾನೆ. ನನ್ನ ಸಮಕ್ಷಮ ಭದ್ರಪ್ಪ ಸಹಿ ಹಾಕಲಿಲ್ಲ ಆದರೆ ಉಪ ನೋಂದಣಾಧಿಕಾರಿ

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-6.pdf

ಹಾಕಿಸಿಕೊಂಡಿರುತ್ತಾರೆ. ನಾನು ಅಲ್ಲೇ ಬೇರೆ ಕಡೆಗೆ ಮತ್ತೊಂದು ನೋಂದಣಿ ಮಾಡಿಸುತ್ತಿದ್ದೆ ನನ್ನ ಸಮಕ್ಷಮ ಹಾಕಿಸಿಕೊಂಡಿಲ್ಲ. ಸಾಕ್ಷಿಯು ಭದ್ರಪ್ಪ ಹೆಬ್ಬಿಟ್ಟಿನ ಗುರುತು ಹಾಕಿರುತ್ತಾನೆ ಅದನ್ನು ನನ್ನ ಎದುರು ಮಾಡಿಲ್ಲ. ಹೆಬ್ಬಿಟ್ಟಿನ ಗುರುತಿನ ಸಾಕ್ಷಿಗೆ ಪರಿಚಯ ಇದ್ದರೇ ಮಾತ್ರ ಸಹಿ ಮಾಡುತ್ತಾರೆ ಅಂದರೆ ಸರಿ. ಒಂದು ದಿನ ಅಥವಾ ಎರಡು ದಿನ ಪರಿಚಯ ಇದ್ದರೆ ಹೆಬ್ಬಿಟ್ಟಿನ ಗುರುತಿಗೆ ಸಾಕ್ಷಿ ಅಂತಾ ಮಾಡುವುದಿಲ್ಲ ಅಂದರೆ ಸರಿ.

3) ಹಿಂದಿನ ದಿನ ರಾಮಪ್ಪ ಅಥವಾ ರಾಜಪ್ಪ ಅನ್ನುವ ಒಬ್ಬನ ಜೊತೆ ಭದ್ರಪ್ಪ ಬಂದಿದ್ದ. ಉಳಿದ ಒಬ್ಬ ಸಾಕ್ಷಿ ನಮ್ಮ ಊರಿನವನು ಅಂತಾ ನನಗೆ ಹೇಳಿರುತ್ತಾನೆ. ನನ್ನ ಸಮಕ್ಷಮ ಸಾಕ್ಷಿದಾರರು ಸಹಿ ಮಾಡಿರುವುದಿಲ್ಲ. ಹೆಬ್ಬಿಟ್ಟಿನ ಗುರುತಿಗೆ ಗುರುತುಬಲ್ಲವರು ಅಂತಾ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಪುಸ್ತಕಕ್ಕೆ ಸಹಿ ಮಾಡಿಸಿಕೊಳ್ಳುತ್ತಾರೆ ಅಂದರೆ ಅದು ನನಗೆ ಗೊತ್ತಿಲ್ಲ, ಸದರಿ ಹೆಬ್ಬಿಟ್ಟಿನ ಗುರುತಿಗೆ ಗುರುತು ಬಲ್ಲವರು ಅಂತಾ ಉಪನೋಂದಣ ಕಚೇರಿಯಲ್ಲಿ ಯಾರು ಸಹಿ ಮಾಡಿದರು ಅಂತಾ ಗೊತ್ತಿಲ್ಲ. ನನಗೆ ಭದ್ರಪ್ಪನ ಮಗ ಜಯಪ್ಪನ ಪರಿಚಯ ಇರುವುದಿಲ್ಲ. ನನ್ನನ್ನು ಸಾಕ್ಷಿಗೆ ಬರಬೇಕು ಅಂತಾ ವಾದಿಯು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾನೆ. ಸಾಕ್ಷಿಯು ಮುಂದುವರೆದು ಬಹಳ ದಿನಗಳು ಆಗಿದ್ದು ನನಗೆ ನನಪಿಲ್ಲ ಅಂತಾ ಹೇಳಿದ್ದರಿಂದ ನಿಮಗೆ ತಿಳಿದಿದ್ದು ಹೇಳಿ ಅಂತಾ ಕರೆದುಕೊಂಡು ಬಂದಿರುತ್ತಾರೆ. ಭದ್ರಪ್ಪನು ಮರಣ ಶಾಸನ ಪತ್ರ ಮಾಡುವಾಗ ಆತನ ಆರೋಗ್ಯ ಸರಿ ಇತ್ತು. ನಾನು ಕಚ್ಚಾ ಮರಣ ಶಾಸನ ಪತ್ರಕ್ಕೆ ಭದ್ರಪ್ಪನ ಸಹಿಯನ್ನು ತೆಗೆದುಕೊಂಡಿಲ್ಲ. ನಾನು ತಯಾರಿಸಿರುವ ಕಚ್ಚಾ ಮರಣ ಶಾಸನ ಪತ್ರ ನನ್ನ ಹತ್ತಿರ ಇರುವುದಿಲ್ಲ.

4) ಭದ್ರಪ್ಪನಿಗೆ 5–6 ವರ್ಷಗಳ ಹಿಂದೆ ದಾಖಲೆ ಮಾಡುವ ಪೂರ್ವ ಪಾರ್ಶವ ವಾಯು ಆಗಿತ್ತು ಅಂದರೆ ಸಾಕ್ಷಿ ನನ್ನಹತ್ತಿರ ಬಂದಾಗ ಕೈ ಕಾಲುಗಳು ಸರಿ ಇತ್ತು ಎಂದು ಹೇಳುತ್ತಾರೆ. ನಾನು ಭದ್ರಪ್ಪನಿಗೆ ಸಹಿ ಮಾಡಲು ಬರುತ್ತದೆಯಾ ಎಂದು ಕೇಳಿರುವುದಿಲ್ಲ. ನಾನು ಭದ್ರಪ್ಪನಿಗೆ ಓದಲು ಬರೆಯಲು ಬರುತ್ತದೆಯಾ ಅಂತಾ

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-6.pdf

ಕೇಳಿರುವುದಿಲ್ಲ. ನಾನು ದಾಖಲೆ ಆಧಾರದ ಮೇಲೆ ಮರಣ ಪತ್ರ ತಯಾರಿಸಿರುತ್ತೇನೆ ನನಗೆ ಯಾರು ಮಾಹಿತಿ ಕೊಟ್ಟಿರುವುದಿಲ್ಲ. ನಾನು ಭದ್ರಪ್ಪನು ಉಪ ನೋಂದಣ ಕಚೇರಿಗೆ ಬಂದಿರುವುದಿಲ್ಲ ಆದರೂ ಸಹ ಬೇರೆ ವ್ಯಕ್ತಿ ಕರೆದುಕೊಂಡು ಹೋಗಿ ಉಪ ನೋಂದಣಿ ಕಚೇರಿಯಲ್ಲಿ ಹೆಬ್ಬಿಟ್ಟಿನ ಗುರುತು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ ಸಾಕ್ಷಿಯು ಸಾಕ್ಷಿದಾರರಾದ ರಾಮಪ್ಪ ಅಥವಾ ರಾಜಪ್ಪ ಅನ್ನುವವನು ಇವರೇ ಭದ್ರಪ್ಪ ಅಂತಾ ತೋರಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ 85 ವರ್ಷ ವಯಸ್ಸಾಗಿರುತ್ತದೆ ಈಗ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಹಾಗೂ ನನ್ನ ಕೈಗಳು ನಡುಗುತ್ತಿವೆ ಎಂದು ಹೇಳುತ್ತಾರೆ. ಭದ್ರಪ್ಪನ ಹೆಬ್ಬಿಟ್ಟಿನ ಗುರುತಿಗೆ ಗುರುತುಬಲ್ಲವರು ಯಾರು ಸಹಿ ಮಾಡಿದರು ಅಂತಾ ನನಗೆ ನೆನಪಿಲ್ಲ. ಕಚ್ಚಾ ಮರಣ ಶಾಸನ ಪತ್ರಕ್ಕೆ ಭದ್ರಪ್ಪನ ಸಹಿ ಪಡೆದುಕೊಂಡಿಲ್ಲ. ಭದ್ರಪ್ಪನು ಆ ದಿನ ಉಪ ನೋಂದಣಿ ಕಚೇರಿಗೆ ಬಂದಿರಲಿಲ್ಲ ಬೇರೆಯವರನ್ನ ಕರೆದುಕೊಂಡು ಹೆಬ್ಬಿಟ್ಟಿನ ಗುರುತು ಹಾಕಿಸಿದ್ದೀರಿ ಂಅಂದರೆ ಸರಿಯಲ್ಲ. ಛಾಪಾ ಕಾಗದವನ್ನು ಯಾರು ತಂದುಕೊಟ್ಟರು ಎಂದು ಗೊತ್ತಿಲ್ಲ. ಛಾಪಾ ಕಾಗದವನ್ನು ಹಿಂದಿನ ದಿನ ತಂದು ಕೊಟ್ಟಿರುತ್ತಾರೆ. ಅಂದರೆ 19 ನೇ ತಾರಿಖಿನಂದು ತಂದುಕೊಟ್ಟರು ಅಂದರೆ ಸರಿ. ಜಯಪ್ಪನ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

c/c 2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-6.pdf

www.ecourtsindia.com

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.eco

This is a True Copy of the Court Records Online. Authenticated @ districts.ecourtsindia.com/cnr/KASM500008282012/truecopy/order-6.pdf